**ಸಾಕ್ಷಿಯನ್ನು ದಿನಾಂಕ: 09.12.2025 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ RDB ವಕೀಲರಿಂದಃ**

ಈ ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಾನು ಗಣಿತದಲ್ಲಿ ಪದವಿಯನ್ನು ಮುಗಿಸಿರುತ್ತೇನೆ. ನಾನು 2018 ರಿಂದ ಸರ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು DMLTC ಎರಡು ವರ್ಷಗಳ ಕೋರ್ಸ ಮಾಡಿರುವುದಿಲ್ಲ. ಸದರಿ ಕೋರ್ಸ ಮಾಡಿರುವರನ್ನು ಮಾತ್ರ ಸರ್ವೆ ಇಲಾಖೆಯಲ್ಲಿ ನೇಮಕ ಮಾಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಡಿಪ್ಲೋಮಾ ಸಿವಿಲ್ ಹಾಗೂ ಬಿಇ ಸಿವಿಲ್ ಮಾಡಿರುವವರು ಮಾತ್ರ ನಿಖರವಾಗಿ ಅಳತೆ ಮಾಡಿ ಹೇಳಬಹುದು ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಅಳತೆ ಮಾಡಲು ನ್ಯಾಯಾಲಯದ ಆದೇಶದ ಮೇರೆಗೆ ನಮ್ಮ ಮೇಲಾಧಿಕಾರಿಗಳಾದ ADLR ಇವರು ನಮಗೆ ನಿರ್ದೇಶನ ಮಾಡಿರುತ್ತಾರೆ. ಸದರಿ ದಾವೆಯ ಬಗ್ಗೆ ನಮ್ಮ ADLR ಇವರು ನಮಗೆ ನೇಮಕ ಮಾಡಿ ಸದರಿ ದಾವೆಯಲ್ಲಿ ವರದಿಯನ್ನು ನೀಡುವಂತೆ ನಿರ್ದೇಶನ ಮಾಡಿರುತ್ತಾರೆ. ನಾನು ಮೆಮೊ ಆಫ್ ಇನ್ಸ್ಟ್ರಕ್ಷನನ್ನು ಓದಿರುತ್ತೇನೆ. ಈ ದಾವೆಯಲ್ಲಿ 1ನೇ ಪ್ರತಿವಾದಿಯು ಜಿಲ್ಲಾಧಿಕಾರಿಗಳು ಆಗಿರುತ್ತಾರೆ. 2ನೇ ಪ್ರತಿವಾದಿಯು ಕೆಎಸ್ ಆರ್ ಟಿ ಸಿ ಯವರು ಇರುತ್ತಾರೆ. 1ನೇ ಪ್ರತಿವಾದಿಯು ನಮ್ಮ ಇಲಾಖೆಯ ಮೇಲಿನ ಅಧಿಕಾರಿಗಳು ಆಗಿರುತ್ತಾರೆ ಎಂದರೆ ನಿಜ. ADLR ಸಹ 1ನೇ ಪ್ರತಿವಾದಿಯ ಅಧೀನದಲ್ಲಿರುತ್ತಾರೆ ಎಂದರೆ ನಿಜ.

ಈ ದಾವೆಯ ದಾವಾ ಆಸ್ತಿಯನ್ನು ಅಳತೆ ಮಾಡುವ ಪೂರ್ವದಲ್ಲಿ ವಾದಿಗೆ ಮತ್ತು ಪ್ರತಿವಾದಿಯರಿಗೆ ನೊಟೀಸ ನೀಡಿರುತ್ತೇನೆ. 1ನೇ ಪ್ರತಿವಾದಿಗೂ ಸಹ

ನೊಟೀಸ ನೀಡಿರುತ್ತೇನೆ. ಸರ್ವೆ ನಂ. 87 ಇದು ಒಟ್ಟು 19 ಎಕರೆ 21 ಗುಂಟೆ ಇರುತ್ತದೆ. ಸರ್ವೆ ನಂ. 87/ಅ ಇದು 16 ಎಕರೆ 1 ಗುಂಟೆ ಇರುತ್ತದೆ. ಸರ್ವೆ ನಂ. 87 ರ ಉತ್ತರಕ್ಕೆ ಸರ್ವೆ ನಂ. 86, ದಕ್ಷಿಣಕ್ಕೆ ಸರ್ವೆ ನಂ. 51 ಮತ್ತು 52, ಪೂರ್ವಕ್ಕೆ ಸರ್ವೆ ನಂ. 52 ಹಾಗೂ ಪಶ್ಚಿಮಕ್ಕೆ ರಾ.ಹೆ. ನಂ.4 ಇರುತ್ತದೆ. ಸದರಿ ಚಕಬಂದಿಯಲ್ಲಿರುವ ಆಸ್ತಿಗಳ ಮಾಲೀಕರಿಗೆ ನಾನು ನೋಟಿಸ ಕೊಟ್ಟಿರುವುದಿಲ್ಲ. ಸದರಿ ಚಕಬಂದಿಯ ಆಸ್ತಿಯ ಮಾಲೀಕರಿಗೆ ನೊಟೀಸ ನೀಡುವ ಕಾನೂನು ಇರುತ್ತದೆ ಎಂದರೆ ಸಾಕ್ಷಿಯು ಈ ದಾವೆಗೆ ಸಂಬಂಧಿಸಿದಂತೆ ಚಕಬಂದಿ ಆಸ್ತಿಯಿರುವ ಮಾಲೀಕರಿಗೆ ನೊಟೀಸ ಕೊಡುವ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. ಹೀಗೆ ಅವಶ್ಯಕತೆ ಇರುವುದಿಲ್ಲ ಎಂದು ಹೇಳಲು ನಾನು ಕಾನುನೂ ತಜ್ಞ ಅಲ್ಲ. ದಾವಾ ಆಸ್ತಿಯ ಚಕಬಂದಿಯ ಆಸ್ತಿಯ ಮಾಲೀಕರಿಗೂ ಸಹ ನೊಟೀಸ ಕೊಡಬೇಕೆನ್ನುವುದು ನನಗೆ ಗೊತ್ತಿದ್ದರೂ ಅವಶ್ಯಕತೆ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ದಿಃ 09.04.2025 ರಂದು ಸರ್ವೆ ಮಾಡಿರುತ್ತೇನೆ. ಸದರಿ ದಿನದಂದು ಸ್ಥಳದಲ್ಲಿ ವಾದಿ ಹಾಗೂ 2ನೇ ಪ್ರತಿವಾದಿಯರು ಮಾತ್ರ ಇದ್ದರು. 1ನೇ ಪ್ರತಿವಾದಿಯಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ ಇರಲಿಲ್ಲ. 1ನೇ ಪ್ರತಿವಾದಿಯರು ಸ್ಥಳದಲ್ಲಿ ಹಾಜರಿರಲ್ಲಿ ಎಂದು ನನ್ನ ವರದಿಯಲ್ಲಿ ಬರೆದಿರುವುದಿಲ್ಲ. ಸದರಿ ವಿಷಯವನ್ನು ಬರೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸರ್ವೆ ನಂ. 87 ನ್ನು ಎಲ್ಲಾ ಕಡೆ ಹೋಗಿ ನೋಡಿರುತ್ತೇನೆ. ಸರ್ವೆ ನಂ. 87 ಕ್ಕೆ ಸಂಬಂದಿಸಿದ ಉತಾರ ಹಾಗೂ ಗ್ರಾಮ ನಕಾಶೆಯನ್ನು ಆಧಾರವಾಗಿಟ್ಟುಕೊಂಡು ಸರ್ವೆ ಮಾಡಿರುತ್ತೇನೆ. ಸರ್ವೇ ನಂ. 87/ಅ ಇದು ಕರ್ನಾಟಕ ಸರ್ಕಾರ, 87/ಬ ನ್ಯಾಯಾಂಗ ಇಲಾಖೆ ಹಾಗೂ 87/ಕ ಅಗ್ನಿ ಶಾಮಕ

ದಳ ಎಂದು ಇರುತ್ತದೆ. ಸರ್ವೆ ನಂ. 87 ರ ಪಶ್ಚಿಮಕ್ಕೆ ಇರುವ ರಾ.ಹೆ.ನಂ. 4 ಸಹ ಸದರಿ ಆಸ್ತಿಯಲ್ಲಿ ಬರುತ್ತದೆ ಎಂದರೆ ನಿಜ. ಸದರಿ ಆಸ್ತಿಯಲ್ಲಿ ರಾ.ಹೆ.ನಂ. 4 ಕ್ಕೆ ಭೂ ಸ್ವಾ ಧೀನ ನಕ್ಷೆ ಪ್ರಕಾರ 1 ಎಕರೆ 6 ಗುಂಟೆ 8 ಆಣೆ ಹೋಗಿರುತ್ತದೆ. ಸದರಿ ರಾ.ಹೆ.ನಂ. 4 ಭೂ ಸ್ವಾ ಧೀನ ಪ್ರಕಾರ ಎಷ್ಟು ಆಸ್ತಿ ಹೋಗಿರುತ್ತದೆ ಎಂದು ನಾನು ಅಳತೆ ಮಾಡಿರುತ್ತೇನೆ. ನಾನು ಅಳತೆ ಮಾಡಿದ ಪ್ರಕಾರ ರಾ.ಹೆ.ನಂ. 4 ರ ಅಳತೆಯು ಸಹ 1 ಎಕರೆ 6 ಗುಂಟೆ 8 ಆಣೆ ಇರುತ್ತದೆ. ಸದರಿ ಅಳತೆಯನ್ನು ನನ್ನ ವರದಿಯ ಜೊತೆಗೆ ಇರುವ ಪಿಟಿ ಸೀಟನಲ್ಲಿ ತೋರಿಸಿರುವುದಿಲ್ಲ. ಸದರಿ ಅಳತೆಯನ್ನು ತೋರಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ದಾವಾ ಆಸ್ತಿಯ ಸರ್ವೆ ಮಾಡಲು ಸ್ಥಳಕ್ಕೆ ಬಂದಾಗ ಸಮಯ ಬೆಳಿಗ್ಗೆ ಸುಮಾರು 10.30 ಗಂಟೆ. ನಾನು ಸರ್ವೆ ಮಾಡಲು ಪ್ರಾರಂಭ ಮಾಡಿದಾಗ ಸಮಯ ಸುಮಾರು ಬೆಳಿಗ್ಗೆ 11.30 ಗಂಟೆ ಆಗಿತ್ತು. ಸರ್ವೆ ಮಾಡಲು ಮೂಲ ಟಿಪ್ಪಣಿ, ಉತಾರಗಳು ಹಾಗೂ ನಕಾಶೆಗಳನ್ನು ಆಧಾರವಾಗಿಟ್ಟುಕೊಂಡಿದ್ದೇನು. ಸದರಿ ದಿನ 2ನೇ ಪ್ರತಿವಾದಿಯರು ಖಾಸಗಿ ಸರ್ವೆಯರು ಮಹಾಂತೇ ಮಾನಿನಿ ಎಂಬುವವರನ್ನು ಕರೆಯಿಸಿದ್ದರು ಎಂದರೆ ನಿಜ. ಸದರಿಯವರು ಹತ್ತಿರ ಇರುವ ಮಾಪನದಿಂದ ನಾನೇ ಅಳತೆಯನ್ನು ಮಾಡಿರುತ್ತೇನೆ. ಸರ್ವೆ ಮಾಡಲು ನಾನು ಅಳತೆ ಪಟ್ಟಿಯನ್ನು ತೆಗೆದುಕೊಂಡು ಹೋಗಿದ್ದೇನು ಆದರೆ ಅಲ್ಲಿ ಕಸ ಇರುವುದರಿಂದ ಅಳತೆ ಮಾಡಲು ಅಡಚಣೆ ಉಂಟಾಗಿದ್ದರಿಂದ ವಾದಿಗಳು ತಕರಾರು ಮಾಡಿದ ಕಾರಣ 2ನೇ ಪ್ರತಿವಾದಿಯರು ಅಳತೆ ಮಾಡುವ ಮಾಪನವನ್ನು ತಂದು ಕೊಟ್ಟ ನಂತರ ನಾನು ಸದರಿ ಮಾಪನದಿಂದ

ಅಳತೆಯನುನ ಮಾಡಿರುತ್ತೇನೆ. ಸದರಿ ಅಳತೆ ಮಾಡಲು ಮಶೀನ ಮಾಪನವನ್ನು ನಮ್ಮ ಮೇಲಾಧಿಕಾರಿಗಳಿಂದ ತರಿಸಿಕೊಳ್ಳಲು ಏನು ಅಡಚಣೆ ಇತ್ತು ಎಂದರೆ ಸಾಕ್ಷಿಯು ನಮ್ಮ ಕಛೇರಿಯಲ್ಲಿ ಅಳತೆ ಮಶೀನಗಳು ಲಭ್ಯತೆ ಇರುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಕಛೇರಿಯಲ್ಲಿ ಅಳತೆ ಮಸೀನಗಳು ಲಬ್ಯ ಇರುವುದಿಲ್ಲ ಎಂದು ನಮ್ಮ ಮೇಲಾಧಿಕಾರಿಗಳು ನನಗೆ ಹೇಳಿರುವುದಿಲ್ಲ ಆದರೆ ನನಗೆ ಗೊತ್ತಿರುವ ವಿಷಯ ಆಗಿರುತ್ತದೆ.

ಮಹಾಂತೇಶ ಮಾನೀನಿ ಇವರಿಗೆ ಅಳತೆ ಮಸೀನ ತೆಗೆದುಕೊಂಡು ಬರುವಂತೆ 2ನೇ ಪ್ರತಿವಾದಿಯು ದೂರವಾಣಿ ಕರೆ ಮಾಡಿ ಹೇಳಿರುತ್ತಾರೆ ಎಂದರೆ ನಿಜ. 2ನೇ ಪ್ರತಿವಾದಿಯು ಕರೆಯಿಸಿದ ಖಾಸಗಿ ಸರ್ವೆಯರರವರ ಅಳತೆ ಮಸೀನಿಂದ ಅಳತೆ ಮಾಡುವ ಕುರಿತು ನಮ್ಮ ಮೇಲಾಧಿಕಾರಿಗಳು ಅನುಮತಿಯನ್ನು ಪಡೆದಿರುವುದಿಲ್ಲ. ಸರ್ವೆ ನಂ. 87 ರಲ್ಲಿ ರಾ.ಹೆ.ನಂ. 4 ಕ್ಕೆ 1 ಎಕರೆ 6 ಗುಂಟೆ 8 ಆಣೆ ಹೋದರೆ 18 ಎಕರೆ 14 ಗುಂಟೆ 8 ಆಣೆ ಆಸ್ತಿ ಉಳಿಯುತ್ತದೆ. ಸದರಿ ಉಳಿದ ಆಸ್ತಿಯ ಅಳತೆಯನ್ನು ನನ್ನ ಪಿಟಿ ಸೀಟನಲ್ಲಿ ಬರೆದಿರುವುದಿಲ್ಲ. ನನ್ನ ವರದಿಯ ಜೊತೆಗೆ ಇರುವ ಪಿಟಿ ಸೀಟನ್ನು ತಯಾರಿಸಲು ಖಾಸಗಿ ಸರ್ವೆಯರು ಮಹಾಂತೇಶ ಮಾನಿನಿ ಇವರು ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 87/ಅ ರಲ್ಲಿ 2ನೇ ಪ್ರತಿವಾದಿಗೆ 4 ಎಕರೆ ಆಸ್ತಿಯನ್ನು ಎಲ್ಲಿ ಇರುತ್ತದೆ ಎಂದು 2ನೇ ಪ್ರತಿವಾದಿಯೇ ನನಗೆ ತೋರಿಸಿರುತ್ತಾರೆ. 2ನೇ ಪ್ರತಿವಾದಿಗೆ ಮಂಜೂರದ ಆಸ್ತಿಯ ಖರೀದಿ ಪತ್ರವನ್ನು ನಾನು ನೋಡಿರುವುದಿಲ್ಲ. ಸದರಿ ಖರೀದಿ ಪತ್ರವನ್ನು ತೋರಿಸುವಂತೆ ನಾನು 2ನೇ ಪ್ರತಿವಾದಿಗೆ ಕೇಳಿರುವುದಿಲ್ಲ. ಸದರಿ ಪತ್ರವನ್ನು ಕೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲಿ ಎಂದರೆ ಸಾಕ್ಷಿಯ ಅದನ್ನು ಕೇಳಲು ಅವಶ್ಯಕತೆ ನನಗೆ

ಇರಲಿಲ್ಲ ಎಂದು ಹೇಳುತ್ತಾರೆ.

ಪಿಟಿ ಸೀಟ ಪ್ರಕಾರ ದಾವಾ ಆಸ್ತಿಗಳು ಎಲ್ಲಿರುತ್ತವೆ ಎಂದರೆ ಸಾಕ್ಷಿಯು ವಾದಿಯನ್ನು ಕೇಳಿದಾಗ ವಾದಿಯು ತಮ್ಮ ಆಸ್ತಿಗಳನ್ನು ಡಿವೈಡ ಮಾಡಿಕೊಂಡಿರುವುದಿಲ್ಲ ಎಂದು ಹೇಳಿರುತ್ತಾರೆ ಆದರೆ ದಾವಾ ಆಸ್ತಿಯನ್ನು ಪ್ರತ್ಯೇಕವಾಗಿ ತೋರಿಸಿರುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ಪಿಟಿ ಸೀಟನಲ್ಲಿ ಪ್ರತ್ಯೇಕವಾಗಿ ತೋರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ವಾದಿಯು ದಾವಾ ಆಸ್ತಿಯನ್ನು ಪ್ರತ್ಯೇಕವಾಗಿ ತೋರಿಸದೇ ಇರುವುದರಿಂದ ನಾನು ತೋರಿಸಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಉದ್ದೇಶಪೂರ್ವಕವಾಗಿ ಪ್ರತ್ಯೇಕವಾಗಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಸರ್ವೆ ಮಾಡಲು ಹೋದ ದಿನ ಬೆಳಗಾವಿಯಿಂದ ಮಹಾಂತೇಶ ಮಾನಿನಿ ಇವರನ್ನು ಕರೆಯಿಸಲು ನಾನು ನಮ್ಮ ಮೇಲಾಧಿಕಾರಿಗಳ ಅನುಮತಿಯನ್ನು ಪಡೆದಿರುವುದಿಲ್ಲ. ಸದರಿ ಮಾನಿನಿರವರನ್ನು 2ನೇ ಪ್ರತಿವಾದಿಯರು ಕರೆಯಿಸಿದ್ದರು ಎಂದರೆ ನಿಜ. ಸದರಿ ದಾವಾ ಆಸ್ತಿಯನ್ನು ನಾವೇ ಸರ್ವೆ ಮಾಡಬೇಕೆಂದು ನ್ಯಾಯಾಲಯದ ಆದೇಶ ಇತ್ತು ಎಂದರೆ ನಿಜ. ನಾನು ಸರ್ವೆ ಮಾಡಲು ಖಾಸಗಿ ಸರ್ವೆಯರ ಸಹಾಯ ಪಡೆಯಬೇಕೆಂದು ನ್ಯಾಯಾಲಯದ ಆದೇಶದಲ್ಲಿ ಇರಲಿಲ್ಲ ಎಂದರೆ ನಿಜ. ಆ ದಿನ ಮಾನಿನಿ ಎಂಬ ಖಾಸಗಿ ಸರ್ವೆಯರ ತಮ್ಮ ಮಶೀನ್ ತಂದು ಆ ದಿನ ನಾವಿಬ್ಬರೂ ಸೇರಿ ಸರ್ವೆ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಅವರ ಮಶೀನ ತೆಗೆದುಕೊಂಡು ನಾನು ಒಬ್ಬನೆ ಸರ್ವೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಾನು ಹೀಗೆ ಖಾಸಗಿ ಸರ್ವೆಯ ಮಶೀನ ತೆಗೆದುಕೊಂಡು ಸರ್ವೆ ಮಾಡಿದ ನಂತರ ಸದರಿ ವಿಷಯವನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ. ಹೀಗೆ ನಮ್ಮ ಮೇಲಾಧಿಕಾರಿಗಳಿಗೆ

ತಿಳಿಸಿದ ವಿಷಯವನ್ನು ನನ್ನ ವರದಿಯಲ್ಲಿ ಬರೆದಿರುವುದಿಲ್ಲ. ಸದರಿ ವಿಷಯವನ್ನು ಬರೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಆ ದಿನ ಖಾಸಗಿ ಸರ್ವೆಯರ ಆದ ಮಹಾಂತೇಶ ಮಾನಿನಿ ಇವರಿಗೆ 2ನೇ ಪ್ರತಿವಾದಿಯು ಅವರ ವೆಚ್ಚವನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಗೂ ಖಾಸಗಿ ಸರ್ವೆಯರ ಸೇರಿಕೊಂಡು ಸರ್ವೆ ಮಾಡಿ ಇಬ್ಬರೂ ಸೇರಿಯೇ ಪಿಟಿ ಸೀಟ್ ತಯಾರಿಸಿರುತ್ತೇವೆ ಎಂದರೆ ಸಾಕ್ಷಿಯು ನಾನು ಒಬ್ಬನೆ ಸರ್ವೆ ಮಾಡಿ ನಾನು ಒಬ್ಬನೆ ಪಿಟಿ ಸೀಟನ್ನು ತಯಾರಿಸಿರುತ್ತೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಸರ್ವೇ ನಂ. 87/ಅ ರಲ್ಲಿ ಬರುವುದಿಲ್ಲ ಎಂದು ಗೊತ್ತಿದ್ದರೂ 2ನೇ ಪ್ರತಿವಾದಿಯ ಜೊತೆಗೆ ಸೇರಿಕೊಂಡು ಸುಳ್ಳಾಗಿ ಸರ್ವೆ ಮಾಡಿ 2ನೇ ಪ್ರತಿವಾದಿಗೆ ಅನುಕೂಲವಾಗುವಂತೆ ಸರ್ವೆ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯು ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ನನಗೆ ಸುಳ್ಳು ವರದಿಯನ್ನು ಸಲ್ಲಿಸುವಂತೆ ಹೇಳಿದಂತೆ ನಾನು ಅವರ ಜೊತೆ ಸೇರಿಕೊಂಡು ಸುಳ್ಳು ಸರ್ವೆ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಪಿಟಿ ಸೀಟ್ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಸರ್ವೆ ನಂ. 87/ಅ ರಲ್ಲಿ ಬರದೇ ಇದ್ದರೂ ಅಲ್ಲಿಯೇ ಬರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**